## ಬಂಧುಗಳು ಆಗುವುದಿಲ್ಲವೇ?

ವಾಹಿನಿಗಳ ಜಾಹೀರಾತಿನಲ್ಲಿ ಗೋಲ್ಡ್ ಕಂಪನಿಗಳ ಅಬ್ಬರ ಹೇಳತೀರದು. ಎಲ್ಲರದ್ದೂ ಒಂದೇ ಮಾತು 'ಮಾರ್ಕೆಟ್ ರೇಟ್ ಗಿಂತ ಜಾಸ್ತಿ ಕೊಡುತ್ತೇವೆ'. ಅದು ಹೇಗೆ ಸಾಧ್ಯ? ಲಾಭವಿಲ್ಲದ ವ್ಯಾಪಾರ ಯಾರು ಮಾಡುತ್ತಾರೆ? ಒಂದು ಜಾಹೀರಾತಿನಲ್ಲಿ ಗಂಡ– ಹೆಂಡತಿ ಎಲ್ಲಾ ಒಡವೆಗಳ ಜೊತೆ ತಾಳಿಯನ್ನು ಕೊಡುತ್ತಾರೆ. ಮಹಾನುಭಾವ ಅಂಗಡಿಯಾತ ಅಗತ್ಯ ಹಣಕ್ಕೆ ತಾಳಿ ಬೇಕಾಗುವುದಿಲ್ಲ ಎಂದು ಅಲ್ಲೇ ಹೆಂಡತಿಗೆ ಹಾಕಿಸುತ್ತಾರೆ. ಅಬ್ಬಾ... ಎಂತಹ ಕರುಣೆ! ಇನ್ನೊಂದು ಜಾಹೀರಾತಿನಲ್ಲಿ ಬಂಧು–ಬಾಂಧವರು ಯಾರೂ ಆಗುವುದಿಲ್ಲ, ನಮ್ಮ ಗೋಲ್ಡ್ ಕಂಪನಿ ಮಾತ್ರ. ಇದು ಎಷ್ಟು ಅಸಂಬದ್ಧ? ಇಂತಹ ಅಸೂಕ್ತ ಮಾತಿಗೆ ಯಾರು ಕಡಿವಾಣ ಹಾಕಬೇಕು?

—ಕೆ.ಎನ್. ಶ್ವೇತ, ಕ್ಯಾತ್ಸಂದ್ರ

## ಧಾರಾವಾಹಿ ನೋಡಿದರೆ ಸಿಟ್ಟೇ ಬರುತ್ತೆ

ಕಲರ್ಸ್ ಕನ್ನಡದ 'ನನ್ನರಸಿ ರಾಧೆ' ಬಗ್ಗೆ ಎಷ್ಟು ಬರೆದರು ತಿದ್ದಿಕೊಳ್ಳುವ ಮನಃಸ್ಥಿತಿ ಕಾಣುತ್ತಿಲ್ಲ. ಇಂಚರಾಳ ತಾಯಿ ಅಳಿಯನ ಮನೆಗೆ ಬಂದು 'ನಾನು ಒಂದು ಮಾತು ಹೇಳಲು ಬಂದೆ, ಇನ್ನು ಮುಂದೆ ಯಾವತ್ತೂ ನನ್ನನ್ನು ಅಮ್ಮಾ ಎಂದು ಕರೆಯಬೇಡ ಎನ್ನುವುದನ್ನು ಹೇಳಿಹೋಗುವ ಕಾರಣಕ್ಕೆ' ಎನ್ನುತ್ತಾಳೆ. ಅದನ್ನು ಅಲ್ಲಿಗೆ ಬಂದು ಹೇಳುವ ಬದಲು ಫೋನ್ ಮಾಡಿ ಹೇಳಬಹುದಿತ್ತು. ತಾಯಿ ಮಗಳ ಅಳುಮುಂಜಿ ಮುಖ ನೋಡಿ ನೋಡಿ ಸಾಕಾಗಿ ಹೋಗಿದೆ ಇನ್ನು ಕಂಡವರ ಮನೆಗೆ ಬೆಂಕಿ ಬಿದ್ದಾಗ ಬೇಳೆ ಬೇಯಿಸಿಕೊಳ್ಳುವ ಲಾವಣ್ಯ, ಮೀನಾಕ್ಷಿ, ಮೋಹಿನಿ ಅವರನ್ನು ನೋಡುವ ವೀಕ್ಷರಾದ ನಮಗೆ ಸಿಟ್ಟು ಬರುತ್ತದೆ.

—ಎನ್.ಎಸ್.ಚಂದ್ರಶೇಖರ್, ಬೆಂಗಳೂರು

## ದ್ವಂದ್ವಾರ್ಥದಿಂದ ರಕ್ಷಿಸಿ

ಕಲರ್ಸ್ ಸೂಪರ್ ಮತ್ತು ಝೀ ಕನ್ನಡದ 'ಮಜಾ ಟಾಕೀಸ್', 'ಕಾಮಿಡಿ ಕಿಲಾಡಿ'ಗಳಲ್ಲಿ ದ್ವಂದ್ವಾರ್ಥ ಸಂಭಾಷಣೆ ಬಗ್ಗೆ ವೀಕ್ಷಕರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರೂ ಚಾನೆಲ್‌ಗಳು ಸುಧಾರಣೆಯ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂಬುದು ಶೋಚನೀಯ.

ವಾರದ ಪತ್ರ

## ಕ್ರಿಯೇಟಿವ್ ಕಾಮಿಡಿ

ಝೀ ಕನ್ನಡದ 'ಕಾಮಿಡಿ ಕಿಲಾಡಿ'ಗಳಿಗೆ ಜಾಣರ ಪೆಟ್ಟಿಗೆ ತಲುಪಿದಂತೆ ಕಾಣುತ್ತದೆ. ಕಳೆದ ಶನಿವಾರ ಮತ್ತು ಭಾನುವಾರ 'ಕ್ರಿಯೇಟಿವ್ ರೌಂಡ್'ನಲ್ಲಿ ಹೊಸತನವಿತ್ತು. ಪ್ರಪಂಚದ ಅತ್ಯುತ್ತಮ ನಗೆ ಸರಣಿ 'ಟಾಮ್ ಅಂಡ್ ಜೆರ್ರಿ'ಯನ್ನು ತೆರೆಯ ಮೇಲೆ ಜೀವಂತ ಪಾತ್ರಗಳ ಮೂಲಕ ಮರುಸೃಷ್ಟಿ ಮಾಡಲಾಗಿತ್ತು. ಅತ್ಯಂತ ವೇಗವಾಗಿ ಗೊಂಬೆಗಳಂತೆ ಓಡಾಡಿ ಕಲಾವಿದರು ಸೈ ಅನಿಸಿಕೊಂಡರು.

ಭಾನುವಾರ ಪ್ರಸಾರವಾದ 'ಸೋಮಾರಿ ಕೈದಿ' ಮೈಮಿಂಗ್ ಸಹ ಅದ್ಭುತವಾಗಿತ್ತು. ಇದರಿಂದ ಮಾತಿಲ್ಲದೆ ಮಾಡುವ ಹಾಸ್ಯ ಮನ ಮುಟ್ಟುತ್ತದೆ ಎಂಬುದು ಖಾತ್ರಿಯಾಯಿತು. ವೃಥಾ ಕೂಗಾಡುವುದು, ಹಾರಾಡುವುದು, ಬಡಿದಾಡುವುದು, ಕುಡಿದಾಡುವುದು ವ್ಯರ್ಥವೆಂದು ಮನದಟ್ಟಾದರೆ ನಿಜಕ್ಕೂ ಹಾಸ್ಯ ಗೆದ್ದಂತೆ. ಆದರೆ ಉತ್ತರ ಕರ್ನಾಟಕದ ವೃತ್ತಿ ರಂಗ ಭೂಮಿಯ ಹಾಸ್ಯವನ್ನು ಹೇಳುವ ಭರದಲ್ಲಿ ಕಲಾವಿದರಿಗೆ 'ಪ್ಲಾಸ್ಟಿಕ್' ಚೊಂಬು ಓದಿಸಿದ್ದು ಮಾತ್ರ ಸರಿಯೆನಿಸಲಿಲ್ಲ. ತೀರ್ಪುಗಾರರೂ ಆ ಬಗ್ಗೆ ಚಕಾರವೆತ್ತಲಿಲ್ಲ. ಚರ್ವಿತ ಚರ್ವಣ ಕಥೆಗಳನ್ನೇ ಹಿಂಜುವುದಕ್ಕಿಂತ ಇಂತಹ ಹೊಸ ಪ್ರಯತ್ನ ಮಾಡಿರುವುದು ಅಭಿನಂದನಾರ್ಹ. ಸದಾ ಹೊಸತನ್ನು ಕಾಮಿಡಿ ನೀಡುವಂತಾಗಲಿ.

—ವಾ. ಮುರಳೀಧರ, ತೀರ್ಥಹಳ್ಳಿ

ವಿಪರ್ಯಾಸವೆಂದರೆ, ತೀರ್ಪುಗಾರರ ಸ್ಥಾನದಲ್ಲಿ ಇರುವ ಜಗ್ಗೇಶ್, ಯೋಗರಾಜ್ ಭಟ್, ರಕ್ಷಿತಾ, ಸೃಜನ್, ಇಂದ್ರಜಿತ್ ಲಂಕೇಶ್ ಹಾಸ್ಯ ಪ್ರಸಂಗ ಎಂದು ನಗುವುದು, ಪೋಲಿ ಉಪಮೇಯಗಳ ಪೂರ್ವಾರ್ಧಗಳನ್ನು ಹೇಳಿ... ಪಕ್ಕ ಕುಳಿತವರ ಮುಖ ನೋಡಿ ಮುಸಿ ಮುಸಿ ನಗುವುದು ಅಸಹ್ಯ ಎನಿಸುತ್ತದೆ.

ಇಂದ್ರಜಿತ್, ಸೃಜನ್ ಮತ್ತು ಸಹನಟರ ಆಂಗಿಕ ಅಭಿನಯ, ಸಂಭಾಷಣೆ ಅಹಿತವೆನಿಸುತ್ತದೆ. ಸ್ಕಿಟ್‌ಗಳಲ್ಲಿ ದ್ವಂದ್ವಾರ್ಥ ನೋಡಿದರೆ ಸ್ಕ್ರೀನಿಂಗ್ ಇಲ್ಲ ಎಂದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಇಂಥ ಕಾರ್ಯಕ್ರಮಗಳು ಬೇಕೆ?

—ಸಿಹಿಮೊಗೆ ರಮೇಶ್, ಮೈಸೂರು

## ಪುನರಾವರ್ತನೆ

ಝೀ ಕನ್ನಡದ ಸರಿಗಮಪ ಕಾರ್ಯಕ್ರಮದಲ್ಲಿ ಮೂಡಿಬಂದ 'ಜಾನಪದ ದರ್ಬಾರ್'ನಲ್ಲಿ ಕೆಲವೇ ಕೆಲವು ಗೀತೆಗಳನ್ನು ಹೊರತುಪಡಿಸಿ ಮತ್ತೆಲ್ಲವೂ ಪುನರಾವರ್ತನೆಗೊಂಡ ಕ್ಯಾಸೆಟ್ ಗೀತೆಗಳಾಗಿದ್ದವು. ರಾಜ್ಯದ ಬೇರೆ ಬೇರೆ ಪ್ರಾಂತ್ಯದಿಂದ ಬರುವ ಸ್ಪರ್ಧಿಗಳು, ಕ್ಯಾಸೆಟ್ ಗೀತೆಗಳಿಂದ ಹೊರಬಂದು ತಮ್ಮದೇ ಪ್ರಾಂತ್ಯದ ಆಡುಭಾಷೆ ಉಚ್ಚಾರಣೆ ಇರುವ ಜನಪದ ಗೀತೆಗಳನ್ನು ಆರಿಸಿ ಹಾಡುವುದರಿಂದ ಜನಪದ ಸೊಗಡು ವಿಸ್ತಾರಗೊಳ್ಳುತ್ತದೆ ವೀಕ್ಷಕರಿಗೂ ಖುಷಿ ತರುತ್ತದೆ. (ಕರಾವಳಿ– ಮಲೆನಾಡು ಭಾಗದ ಜನಪದ ಗೀತೆಗಳು ಸ್ಪರ್ಧೆಗಳ ಮೂಲಕ ಹೊರಬಂದಿರುವುದು ಅತೀ ವಿರಳ)

—ವಿಭಾ ಶ್ರೀನಿವಾಸ್, ಬೆಂಗಳೂರು

## ಇರಲಿ ಎಚ್ಚರಿಕೆ!

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಶಾಂತಂ ಪಾಪಂ ಸಂಚಿಕೆ ಬದಲಾದ ಸಮಯ ಖುಷಿ ತಂದಿತು. ಇದುವರೆಗೂ ಬಂದ ಎಲ್ಲಾ ಸಂಚಿಕೆಗಳಲ್ಲಿ ಉತ್ತಮ ಅಭಿನಯದವರು ಪಾತ್ರ ನಿರ್ವಹಿಸಿದ್ದಾರೆ. ಧೂಮಪಾನ, ಮದ್ಯಪಾನದ ಸನ್ನಿವೇಶ ಬಂದಾಗ 'ಶಾಸನ ವಿಧಿಸಿದ ಎಚ್ಚರಿಕೆ' ಎಂಬ ಸೂಚನೆಯನ್ನು ತಪ್ಪದೇ ಹಾಕಲೆಂದು ಕಳಕಳಿ.

—ಅಂಚೆ ಸುಬ್ರಹ್ಮಣ್ಯ

## ಬೇರೆ ಸಿನಿಮಾ ಹಾಕಿ

ಕನ್ನಡ ಚಿತ್ರರಂಗಕ್ಕೆ 75 ವರ್ಷಗಳು ತುಂಬಿ ಸಾವಿರಾರು ಚಲನಚಿತ್ರಗಳು ಬಿಡುಗಡೆಯಾಗಿವೆ. ಆದರೂ ಕನ್ನಡ ವಾಹಿನಿಗಳಲ್ಲಿ ಪ್ರಸಾರ ಆಗುತ್ತಿರುವ ಚಿತ್ರಗಳು ಬಹಳ ಕಡಿಮೆ. ರಾಜ್‌ಕುಮಾರ್ ಅವರೊಬ್ಬರೇ ಇನ್ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದರೂ ಪ್ರಸಾರ ಆಗುತ್ತಿರುವ ಚಿತ್ರಗಳು ಬೆರಳೆಣಿಕೆಯಷ್ಟು ಮಾತ್ರ.

'ಭಕ್ತ ಪ್ರಹ್ಲಾದ', 'ಮಿಂಚಿನ ಓಟ', 'ಸೊಸೆ ತಂದ ಸೌಭಾಗ್ಯ' ಚಿತ್ರಗಳು ವಾರಕ್ಕೊಮ್ಮೆ ಪ್ರಸಾರವಾಗುತ್ತಿವೆ. ಇವೆಲ್ಲ ಉತ್ತಮ ಚಿತ್ರಗಳಾದರೂ, ಪದೇ ಪದೇ ನೋಡಲು ಬೇಸರವಾಗುತ್ತದೆ. ಎಷ್ಟೋ ಹಳೆಯ ಹಾಗೂ ಉತ್ತಮ ಚಿತ್ರಗಳು ಒಮ್ಮೆಯೂ ಪ್ರಸಾರವಾಗಿಲ್ಲ. ಅದಕ್ಕೆ ಅದರದೇ ಆದ ಮಿತಿಗಳು ಇರಬಹುದು. ಬೇರೆ ಹೊಸ ಸಿನಿಮಾಗಳನ್ನು ಪ್ರಸಾರ ಮಾಡುವ ಉದಾರತೆಯನ್ನು ವಾಹಿನಿಯವರು ತೋರಿಸಬೇಕು ಎಂದು ವಿನಂತಿ.

—ಎಸ್. ಶಶಿಧರ್, ಬೆಂಗಳೂರು

## ಸಿದ್ಧ ಸೂತ್ರ ದಾಟದ ಧಾರಾವಾಹಿಗಳು

ಸಿನಿಮಾದಲ್ಲಿ ಇದ್ದ ಸಿದ್ಧ ಸೂತ್ರಗಳು ಧಾರಾವಾಹಿಗಳಿಗೂ ಪಸರಿಸಿದೆ. ಸುಪಾರಿ ಹತ್ಯೆ ಇಲ್ಲದ ಧಾರಾವಾಹಿಗಳು ಬಹುತೇಕ ಅಪರೂಪ. ಕಥೆ ಯಾವುದೇ ಇರಲಿ, ಹೇಗಾದರೂ ಪಿಸ್ತೂಲ್, ಮಚ್ಚು ಮುನ್ನಲೆಗೆ ಬರುತ್ತವೆ. 'ಮಗಳು ಜಾನಕಿ'ಯಲ್ಲಿಯೂ ಅದು ಮೆರೆದಿತ್ತು. ಈಗ ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ಆಸಕ್ತಿಯಿಂದ ವೀಕ್ಷಿಸುತ್ತಿರುವ 'ಕನ್ನಡತಿ'ಯಂತಹ ಧಾರಾವಾಹಿಗಳಲ್ಲಿಯೂ ಪಿಸ್ತೂಲ್ ಸದ್ದು ಮಾಡುತ್ತಿರುವುದು ಇದಕ್ಕೊಂದು ಉದಾಹರಣೆ. ಮೊದಲೆಲ್ಲ ಸಾತ್ವಿಕ ಧಾರಾವಾಹಿಯಂತೆ ಕಾಣುತ್ತಿದ್ದ ಕನ್ನಡತಿ ಒಮ್ಮೆಲೆ ರಕ್ತ ಪಾತಕ್ಕೆ ತಿರುಗಿದ್ದು ನಮಗೆ ಅಚ್ಚರಿಯನ್ನು ಉಂಟುಮಾಡಿದೆ.

—ರಮಾನಂದ ಶರ್ಮಾ